ಕರ್ನಾಟಕ ಸರ್ಕಾರ

# ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,

# ಹೊಸ ಸಾರ್ವಜನಿಕ ಕಚೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001

ಸಂಖ್ಯೆ:ಸಿ3(7)ಪ್ರಾ.ಶಿ. ವರ್ಗ-07/2017-18 ದಿನಾಂಕ: 06/10/2018

**: ಜ್ಞಾಪನ :**

ವಿಷಯ:- 2017-18 ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ಮಾಡುವ ಬಗ್ಗೆ ಪರಿಷ್ಕೃತ ವೇಳಾಪಟ್ಟಿ- ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳು, ಕಡ್ಡಾಯ ವರ್ಗಾವಣೆ ಹಾಗು ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತಂತೆ ಸಮಗ್ರ ಪರಿಷ್ಕೃತ ವೇಳಾಪಟ್ಟಿ.

ಉಲ್ಲೇಖ:- 1) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2017 (ಸರ್ಕಾರದ ಅಧಿಸೂಚನೆ : ಸಂವ್ಯಶಾಇ 22 ಶಾಸನ 2017 ದಿನಾಂಕ 18/04/2017)

2) ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ನಿಯಮಗಳು 2017 (ಸರ್ಕಾರದ ಅಧಿಸೂಚನೆ ಇಡಿ 12 ಇಟಿಆರ್ 2017 ದಿನಾಂಕ 29/11/2017)

3) ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 19/05/2017 (ವೃಂದ ಬಲದ ಆದೇಶ)

4) ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 07/08/2017 (ವೃಂದ ಮತ್ತು ನೇಮಕಾತಿ ಅಧಿಸೂಚನೆ)

5) ಈ ಕಛೇರಿ ಅಧಿಸೂಚನೆ ಸಂಖ್ಯೆ ಸಿ3(1) ವೃಂದ ಬಲ.ಜಿಲ್ಲಾ ಹಂ / 2017-18 ದಿನಾಂಕ 02/02/2018

6) ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣಾ ವೇಳಾಪಟ್ಟಿ ಜ್ಞಾಪನ ಸಂಖ್ಯೆ: ಸಿ3(7) ಪ್ರಾ.ಶಾ.ಶಿ ವರ್ಗ-07/2017-18 ದಿನಾಂಕ: 29/12/2017, 06/01/2018, 19/01/2018, 09/02/2018, 24/02/2018, 13/03/2018, 16/03/2018, 06/08/2018, 15/08/2018, 17/09/2018 ಇತರೆ ಸಂಬಂಧಿತ ಹಾಗು
ಸಿ4(7) ಪ್ರೌಶಿವರ್ಗ 29 2017-18 ದಿನಾಂಕ 01/01/2018, 06/01/2018, 19/01/2018, 25/01/2018, 13/03/2018, 06/08/2018, 15/08/2018, ಮತ್ತು 25/08/2018 , 18/09/2018 ಇತರೆ ಸಂಬಂಧಿತ.

----*****----

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (6)ರ ಜ್ಞಾಪನಗಳಲ್ಲಿ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರ ವರ್ಗಾವಣೆ ಪ್ರಕ್ರಿಯೆಗೆ ಮಾರ್ಗಸೂಚಿ ಸಹಿತ ವೇಳಾಪಟ್ಟಿಯನ್ನು ಹೊರಡಿಸಲಾಗಿತ್ತು. ಈಗಾಗಲೇ ದಿನಾಂಕ 17.09.2018ರಲ್ಲಿ ಹೊರಡಿಲಾಗಿದ್ದ ಪರಿಷ್ಕೃತ ವೇಳಾಪಟ್ಟಿಗನುಸಾರವಾಗಿ ಹೆಚ್ಚುವರಿ ಪ್ರಕರಣಗಳನ್ನೊಳಗೊಂಡಂತೆ ವರ್ಗಾವಣಾ ಪ್ರಕ್ರಿಯೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಹೆಚ್ಚುವರಿ ಶಿಕ್ಷಕರ ಪಟ್ಟಿಗಳ ಕುರಿತಂತೆ ಹಲವು ಆಕ್ಷೇಪಣೆಗಳು ವ್ಯಕ್ತಗೊಂಡ ನಂತರ ಸನ್ಮಾನ್ಯ ಸಚಿವರು ವರ್ಗಾವಣೆಗಳನ್ನು ತಾತ್ಕಾಲಿಕವಾಗಿ ಮುಂದೂಡಲು ಆದೇಶಿಸಿದಂತೆ ತಾತ್ಕಾಲಿಕವಾಗಿ ಸ್ಥಗಿತಗೊಳಿಲಾಗಿತ್ತು. ದಿನಾಂಕ 27.09.2018 ರಂದು ನಡೆಯಬೇಕಾಗಿದ್ದ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆ ಇದೇ ಕಾರಣದಿಂದ ನಡೆಯಲಿಲ್ಲ.

ಇದೇ ಕುರಿತಂತೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಹೆಚ್ಚುವರಿ ಶಿಕ್ಷಕರ ಪಟ್ಟಿಗಳ ಕುರಿತು ಶಿಕ್ಷಕರಿಂದ ಸ್ವೀಕೃತವಾಗುವ ಆಕ್ಷೇಪಣೆಗಳ ಬಗ್ಗೆ ಸೂಕ್ತವಾಗಿ ಮತ್ತು ಕರಾರುವಕ್ಕಾಗಿ ಪರಿಶೀಲಿಸಿ ಇತ್ಯರ್ಥಪಡಿಸಲು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ಹೊರಡಿಸಿರುತ್ತಾರೆ. ಮುಂದುವರೆದು ಹೆಚ್ಚುವರಿ ಶಿಕ್ಷಕರ ಪಟ್ಟಿಗಳ ಕುರಿತಾದ ಆಕ್ಷೇಪಣೆಗಳನ್ನು ಇತ್ಯರ್ಥಪಡಿಸಿರುವ ಕುರಿತು ಮಾನ್ಯ ಸಚಿವರು ಖುದ್ದು ಅಂತಹ ಕ್ರಮದ ಬಗ್ಗೆ ಪರಿಶೀಲಿಸುವುದಾಗಿ ಸೂಚನಾ ಟಿಪ್ಪಣಿಯನ್ನು ನೀಡಿರುತ್ತಾರೆ.

ಎಲ್ಲಾ ಹಿನ್ನೆಲೆಯಲ್ಲಿ ದಿನಾಂಕ 27.09.2018ರಿಂದ ಈವರೆವಿಗೂ ವರ್ಗಾವಣೆಗಳಿಗೆ ಸಂಬಂಧಪಟ್ಟಂತೆ ಹೆಚ್ಚುವರಿ ಶಿಕ್ಷಕರ ಪಟ್ಟಿ, ಕಡ್ಡಾಯ ವರ್ಗಾವಣೆ ಶಿಕ್ಷಕರ ಪಟ್ಟಿ ಹಾಗೂ ಕೋರಿಕೆ ವರ್ಗಾವಣೆಗಳ ಬಗ್ಗೆ ಶಿಕ್ಷಕರಿಗೆ On-line ನಲ್ಲಿ ವಿಷದವಾಗಿ ತಮ್ಮ ಆಕ್ಷೇಪಣೆಗಳನ್ನು "Other" ವರ್ಗೀಕರಣದಲ್ಲಿ ದಾಖಲಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಹಿಂದೆ "Other" ಎಂಬ ಶೀರ್ಷಿಕೆಯಲ್ಲಿ ಆಕ್ಷೇಪಣೆಗಳನ್ನು ದಾಖಲಿಸಲು ಅವಕಾಶವಿರಲಿಲ್ಲ. ಮಾನ್ಯ ಪ್ರಧಾನ ಕಾರ್ಯದರ್ಶಿಗಳ ಸೂಚನೆ ಮೇರೆಗೆ ಮುಕ್ತವಾಗಿ ಆಕ್ಷೇಪಣೆಗಳನ್ನು ಸಲ್ಲಿಸಲು On-line ನಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ.

ಇದೀಗ ಕೆಳಗಿನಂತೆ ಹೆಚ್ಚುವರಿ ಸೇರಿದಂತೆ ಅನುಕ್ರಮವಾಗಿ ದಿನಾಂಕಗಳನ್ನು ಗುರುತಿಸಿ ಪರಿಷ್ಕೃತ ಸಮಗ್ರ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. ಉಲ್ಲೇಖಿತ ಜ್ಞಾಪನಗಳಲ್ಲಿನ ಎಲ್ಲಾ ಸೂಚನೆಗಳು/ ಮಾರ್ಗಸೂಚಿಗಳು ಯಥಾವತ್ತಾಗಿ ಮುಂದುವರೆಯುತ್ತವೆ. **ಈ ವೇಳಾಪಟ್ಟಿಯು ಚುನಾವಣಾ ನೀತಿ ಸಂಹಿತೆ ಕ್ರಮಗಳಿಗೆ ಒಳಪಡುತ್ತದೆ.**

**2018-19 ನೇ ಸಾಲಿನ ಹೆಚ್ಚುವರಿ ಶಿಕ್ಷಕರ ಮರು ನಿಯುಕ್ತಿ ಕ್ರಮಗಳ ವೇಳಾಪಟ್ಟಿ :**

| ಕ್ರಮ ಸಂಖ್ಯೆ | ವಿವರ | ದಿನಾಂಕಗಳು | ಕ್ರಮವಹಿಸುವ ಅಧಿಕಾರಿಗಳು |
|---|---|---|---|
| 1 | ಟಿಡಿಎಸ್ ನಲ್ಲಿ ಹಾಗು ವರ್ಗಾವಣಾ ತಂತ್ರಾಂಶದಲ್ಲಿ ಶಾಲೆಗಳ ವಲಯದ ವಿವರಗಳನ್ನು ಇಂದೀಕರಿಸುವುದು | ಪ್ರಕ್ರಿಯೆ ಪೂರ್ಣಗೊಂಡಿದೆ. | |
| 2 | ಆಕ್ಷೇಪಣೆಗಳ ಹಿನ್ನೆಲೆಯಲ್ಲಿ ಟಿಡಿಎಸ್ ನಲ್ಲಿ ಶಿಕ್ಷಕರ ಎಲ್ಲ ವಿವರಗಳನ್ನು ಇಂದೀಕರಿಸಲು. ಪರಿಶೀಲಿಸಲು ಅವಕಾಶ ಕಲ್ಪಿಸಲಾಗಿದೆ | 06/10/2018 ರವರೆಗೆ | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು<br>3. ಡಿಡಿಟಿ ಗಳು |
| 3 | • ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿ ಪ್ರಕಟಣೆ<br>• ಹೆಚ್ಚುವರಿ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಶಿಕ್ಷಕರುಗಳು ಸೂಕ್ತ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ನಿಗಧಿಪಡಿಸಿದ ಅವಧಿ | 08/10/2018<br>08/10/2018 ರಿಂದ 09/10/2018 | 1.ಉಪನಿರ್ದೇಶಕರು(ಆಡಳಿತ)<br>2.ಕ್ಷೇತ್ರಶಿಕ್ಷಣಾಧಿಕಾರಿಗಳು<br>ಸಂಬಂಧಪಟ್ಟ ಶಿಕ್ಷಕರು |
| 4 | ಶಿಕ್ಷಕರು ಸಲ್ಲಿಸಿರುವ ಆಕ್ಷೇಪಣೆಗಳನ್ನು ಶಿಕ್ಷಕರ ಸೇವಾ ದಾಖಲೆಗಳೊಂದಿಗೆ ಪರಿಶೀಲಿಸಿ, ಆಕ್ಷೇಪಣೆಯನ್ನು ಪುರಸ್ಕರಿಸುವ ಅಥವಾ ತಿರಸ್ಕರಿಸುವುದು (ಆನ್-ಲೈನ್ ನಲ್ಲಿ) | 09/10/2018 ರಿಂದ 11/10/2018 | ಕ್ಷೇತ್ರಶಿಕ್ಷಣಾಧಿಕಾರಿಗಳು |
| 5 | • ಕ್ಷೇತ್ರಶಿಕ್ಷಣಾಧಿಕಾರಿಗಳು ಸಲ್ಲಿಸಿರುವ ಪಟ್ಟಿಯನ್ನು ಪರಿಶೀಲಿಸಿ ಜಿಲ್ಲಾ ಹಂತದಲ್ಲಿ ಹೆಚ್ಚುವರಿ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿಯ ಪ್ರಕಟಣೆ ಆನ್-ಲೈನ್ ನಲ್ಲಿ<br>• ಶಾಲಾವಾರು ಖಾಲಿ ಹುದ್ದೆಗಳ ಮತ್ತು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರುಗಳ (ವಿಷಯವಾರು) ಸಂಖ್ಯೆ ಹಾಗೂ ಹೆಚ್ಚುವರಿಯಾಗುವ ಶಿಕ್ಷಕರ ಸ್ಥಳ | 11/10/2018 | ಉಪನಿರ್ದೇಶಕರು(ಆಡಳಿತ) |

| | | | |
|---|---|---|---|
| | ಮತ್ತು ವಿಷಯವಾರು ಶಿಕ್ಷಕರ ಹೆಸರುಗಳ ತಾತ್ಕಾಲಿಕ ಪಟ್ಟಿಯನ್ನು ಆನ್-ಲೈನ್ ನಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು. | | |
| 6 | ಪ್ರಾಥಮಿಕ ಶಾಲಾ ಶಿಕ್ಷಕರ ಹೆಚ್ಚುವರಿ ಶಿಕ್ಷಕರ ಕೌನ್ಸಿಲಿಂಗ್ ಪ್ರಕ್ರಿಯೆ- ಆನ್-ಲೈನ್‌ನಲ್ಲಿ ಮೊದಲನೇ ಹಂತದಲ್ಲಿ ತಾಲ್ಲೂಕು ವ್ಯಾಪ್ತಿಗೆ ಮತ್ತು ಎರಡನೇ ಹಂತದಲ್ಲಿ ಜಿಲ್ಲಾ ಹಂತಕ್ಕೆ | 15/10/2018 ರಿಂದ 16/10/2018 | ಉಪನಿರ್ದೇಶಕರು(ಆಡಳಿತ) |
| 7 | ಕೌನ್ಸಿಲಿಂಗ್ ಪ್ರಕ್ರಿಯೆ ಪೂರ್ಣಗೊಂಡ ನಂತರ ಶಿಕ್ಷಕರ ಮಾಹಿತಿಯನ್ನು ಟಿಡಿಎಸ್‌ನಲ್ಲಿ ಅಳವಡಿಸಿ ಶಿಕ್ಷಕರ ಪಟ್ಟಿ ಹಾಗೂ ಅಂಕಿ-ಅಂಶ ಸಹಿತ ವರದಿಯನ್ನು ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಇವರಿಗೆ ಸಲ್ಲಿಸುವ ದಿನಾಂಕ. | 15/10/2018 ರಿಂದ 17/10/2018 | ಉಪನಿರ್ದೇಶಕರು(ಆಡಳಿತ) |

## ಕಡ್ಡಾಯ/ಕೋರಿಕೆ/ಪರಸ್ಪರ ವರ್ಗಾವಣೆಗಳ ಪರಿಷ್ಕೃತ ವೇಳಾಪಟ್ಟಿ-2

| ಕ್ರ.ಸಂ | ವಿವರ | ಪರಿಷ್ಕೃತ ದಿನಾಂಕಗಳು | ಕ್ರಮ ವಹಿಸುವ ಅಧಿಕಾರಿಗಳು |
|---|---|---|---|
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳ ಕುರಿತು ಕ್ರಮಗಳು** | | |
| 1 | ಕೋರಿಕೆ ವರ್ಗಾವಣೆ ಬಯಸುವ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಅರ್ಜಿಗಳನ್ನು ಕರೆಯಲು ಕ್ರಮ | ಪ್ರಕ್ರಿಯೆ ಮುಗಿದಿದೆ | ಪ್ರಕ್ರಿಯೆ ಮುಗಿದಿದೆ |
| 2. | ವರ್ಗಾವಣೆ ಕೋರುವ ಸರ್ಕಾರಿ ಪ್ರಾಥಮಿಕ/ಪ್ರೌಢ ಶಾಲಾ ಶಿಕ್ಷಕರ ವೃಂದ ಇಲಾಖಾ ವೆಬ್ ಸೈಟ್‌ನಲ್ಲಿ ಅಳವಡಿಸಿರುವಂತೆ ಅಂತರ್ಜಾಲದ [on line] ಮೂಲಕ ಆನ್-ಲೈನ್ ಸ್ವೀಕೃತಿ ಪಡೆಯಲು ನಿಗದಿಪಡಿಸಿರುವ ಅವಧಿ | ಪ್ರಕ್ರಿಯೆ ಮುಗಿದಿದೆ | ಪ್ರಕ್ರಿಯೆ ಮುಗಿದಿದೆ |
| 3. | ಆನ್-ಲೈನ್‌ನಲ್ಲಿ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಪಡೆದು, ಶಿಕ್ಷಕರು ತಮ್ಮ ಸಹಿಯನ್ನು ನಮೂದಿಸಿ ಕ್ಷೇತ್ರಶಿಕ್ಷಣಾಧಿಕಾರಿಯವರಿಗೆ ಸಲ್ಲಿಸಲು ನಿಗಧಿ ಪಡಿಸಿರುವ ಅವಧಿ | ಪ್ರಕ್ರಿಯೆ ಮುಗಿದಿದೆ | ಪ್ರಕ್ರಿಯೆ ಮುಗಿದಿದೆ |
| 4 | ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಒಳಗಿನ ಮತ್ತು ಘಟಕದ ಹೊರಗಿನ) ತಾತ್ಕಾಲಿಕ ಆದ್ಯತಾ ಪಟ್ಟಿ ಪ್ರಕಟಣೆ | 10/10/2018 | 1) ಪ್ರಾಥಮಿಕ ಶಿಕ್ಷಣ ನಿರ್ದೇಶಕರು,<br>2) ಅಪರ ಆಯುಕ್ತರ ಕಛೇರಿ, ಧಾರವಾಡ<br>3) ಅಪರ ಆಯುಕ್ತರ ಕಛೇರಿ, ಗುಲ್ಬರ್ಗಾ<br>4) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು/<br>5) ಆಯುಕ್ತಾಲಯದ ಜಂಟಿ ನಿರ್ದೇಶಕರು, ಧಾರವಾಡ/ಗುಲ್ಬರ್ಗಾ<br>6) ಉಪನಿರ್ದೇಶಕರು(ಆಡಳಿತ)<br>7) ಕ್ಷೇತ್ರಶಿಕ್ಷಣಾಧಿಕಾರಿಗಳು |

| | | | |
|---|---|---|---|
| 5 | ಕೋರಿಕೆ ಹಾಗೂ ಪರಸ್ಪರ ವರ್ಗಾವಣೆಗಳಿಗೆ ಸಂಬಂಧಿಸಿದ ತಾತ್ಕಾಲಿಕ ಆದ್ಯತಾ ಪಟ್ಟಿಗಳಿಗೆ ಆಕ್ಷೇಪಣೆಗಳನ್ನು (ಘಟಕದ ಹೊರಗೆ ಮತ್ತು ಒಳಗೆ) ಸಲ್ಲಿಸಲು ನಿಗಧಿಪಡಿಸಿರುವ ಅವಧಿ. | 10/10/2018 ರಿಂದ 12/10/2018 | ಸಂಬಂಧಿಸಿದ ಶಿಕ್ಷಕರುಗಳು |
| 6 | ಕ್ಷೇತ್ರಶಿಕ್ಷಣಾಧಿಕಾರಿಗಳ ಹಂತದಲ್ಲಿ ಸೇವಾದಾಖಲೆಗಳೊಂದಿಗೆ ತಾಳೆ ನೋಡಿ ಅಂತರ್ಜಾಲದಲ್ಲಿ [on-line] ಅರ್ಜಿಗಳನ್ನು ಪರಿಶೀಲಿಸಿ, ನ್ಯೂನತೆಗಳಿದ್ದಲ್ಲಿ ಸರಿಪಡಿಸಿ ಆಕ್ಷೇಪಣೆಗಳನ್ನು ಪರಿಗಣಿಸಿ ಮಾಹಿತಿಗಳನ್ನು ದೃಢೀಕರಿಸಿ ಅರ್ಜಿಗಳನ್ನು ಆನ್-ಲೈನ್‌ನಲ್ಲಿ ಅನುಮೋದಿಸಲು ನಿಗದಿ ಪಡಿಸಿರುವ ಅವಧಿ | 11/10/2018 ರಿಂದ 15/10/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 7 | ವರ್ಗಾವಣೆ ತಂತ್ರಾಂಶದಲ್ಲಿ ಅನುಮೋದಿಸಿ ಪಟ್ಟಿಯನ್ನು ಸಂಬಂಧಿಸಿದ ಉಪನಿರ್ದೇಶಕರಿಗೆ ದೃಢೀಕೃತ ದಾಖಲೆಗಳೊಂದಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ. (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು, ಆದ್ಯತಾ ಪಟ್ಟಿಗನುಸಾರ ಅದೇ ಕ್ರಮದಲ್ಲಿ ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | 16/10/2018 | 1) ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು<br>2) ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ) |
| | **ಕಡ್ಡಾಯ ವರ್ಗಾವಣೆ ಕ್ರಮಗಳು**<br>**(ಕಡ್ಡಾಯ ವರ್ಗಾವಣೆಗಳ ಕುರಿತಂತೆ ಕ್ಷೇತ್ರಶಿಕ್ಷಣಾಧಿಕಾರಿಗಳ/ಉಪನಿರ್ದೇಶಕರ ಹಂತದಲ್ಲಿ ಪೂರ್ವಭಾವಿ ಕ್ರಮಗಳು** | | |
| 1 | ಕಡ್ಡಾಯ ವರ್ಗಾವಣೆಗಳು: ನಿಯಮ 21(3) ರನ್ವಯ-ಮೊದಲನೇ ಹಂತದಲ್ಲಿ ಯಾವುದೇ ತಾಲ್ಲೂಕಿನಲ್ಲಿ ಮಂಜೂರಾದ ವೃಂದಬಲದ ಶೇ 20 ಮತ್ತು ಹೆಚ್ಚಿನ ಖಾಲಿ ಹುದ್ದೆಗಳು ಇರುವ ತಾಲ್ಲೂಕುಗಳಿಗೆ ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ ಕಡ್ಡಾಯ ವರ್ಗಾವಣೆಗಳನ್ನು ಹಮ್ಮಿಕೊಳ್ಳಲು ಪಟ್ಟಿ ಪ್ರಕಟ ಹಾಗು ಸ್ಥಳ ನಿಯುಕ್ತಿ | ಈಗಾಗಲೇ ಪ್ರಕ್ರಿಯೆ ಮುಗಿದಿದೆ | ಜಿಲ್ಲಾ ಉಪನಿರ್ದೇಶಕರು(ಆಡಳಿತ) ಸಹಯೋಗ - ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳು |
| 2 | • "ಎ"ವಲಯದಲ್ಲಿ 10 ವರ್ಷಕ್ಕಿಂತಲೂ ಹೆಚ್ಚು ಕಾಲ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು, ವರ್ಗಾವಣೆಗೆ ನಿಗದಿಪಡಿಸಿದ ಮಿತಿಗೊಳಪಟ್ಟ ಸಂಖ್ಯೆಯನ್ನು ಗಮನಿಸಿ ಪ್ರಕಟಣಾ ಫಲಕದಲ್ಲಿ ಪ್ರಕಟಿಸಿ ಆಕ್ಷೇಪಣೆಗಳನ್ನು ಆಹ್ವಾನಿಸುವುದು.<br>• ಹೆಚ್ಚುವರಿ ಶಿಕ್ಷಕರ ಮರುನಿಯುಕ್ತಿ ಪೂರ್ಣಗೊಳಿಸಿದ ನಂತರ ಸದರಿ ಪಟ್ಟಿಯನ್ನು ಅಂತಿಮಗೊಳಿಸುವುದು. | 09/10/2018 ರಿಂದ 11/10/2018<br>17/10/2018 | |
| 3 | • ಆಕ್ಷೇಪಣೆಗಳನ್ನು ಪರಿಶೀಲಿಸಿ ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ | 17/10/2018 | |

| | | | |
|---|---|---|---|
| | (ಆನ್-ಲೈನ್)<br>• 'ಎ' ವಲಯದಲ್ಲಿನ ಶಿಸ್ತು ಪ್ರಕರಣಗಳ ಶಿಕ್ಷಕರ ಪಟ್ಟಿಯನ್ನು ಪ್ರಕಟಿಸುವುದು. | | |
| 4 | ಕಡ್ಡಾಯ ವರ್ಗಾವಣೆಗೊಳಪಡುವ ಶಿಕ್ಷಕರ ಹುದ್ದೆಗಳನ್ನು ಡೀಮ್ಡ್ (ಪರಿಗಣಿತ) ಹುದ್ದೆಗಳು ಎಂಬುದಾಗಿ ಪರಿಗಣಿಸಿದಂತೆ ಕೋರಿಕೆ ವರ್ಗಾವಣೆಗಳಿಗೆ ಲಭ್ಯವಿರುವ ವಲಯವಾರು, ವಿಷಯವಾರು ಖಾಲಿ ಹುದ್ದೆಗಳ ವಿವರಗಳನ್ನು ವೆಬ್‌ಸೈಟ್ ನಲ್ಲಿ ಹಾಗೂ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದು (ಹೆಚ್ಚುವರಿ ನಂತರದ ಖಾಲಿ ಹುದ್ದೆ) (ಡೀಮ್ಡ್ ಹುದ್ದೆಗಳನ್ನು 'ಸಿ' ವಲಯದ ಘಟಕದ ಒಳಗಿನ ಕೋರಿಕೆ ವರ್ಗಾವಣೆಗೆ ಅರ್ಜಿ ಸಲ್ಲಿಸಿರುವ ಶಿಕ್ಷಕರಿಗೆ ಮಾತ್ರ ಪರಿಗಣಿಸತಕ್ಕದ್ದು. | 17/10/2018 | |
| 5 | ಕಡ್ಡಾಯ ವರ್ಗಾವಣೆ – ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ 'ಎ' ವಲಯದಲ್ಲಿ 10 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ ( ಶೇಕಡ 20ಕ್ಕಿಂತ ಹೆಚ್ಚಿನ ಖಾಲಿ ಹುದ್ದೆ ಇರುವ ತಾಲ್ಲೂಕಿಗೆ ಆದ್ಯತೆ) | ಪ್ರಕ್ರಿಯೆ ಮುಗಿದಿದೆ | ಪ್ರಕ್ರಿಯೆ ಮುಗಿದಿದೆ |
| | **ಕೋರಿಕೆ ವರ್ಗಾವಣೆಗಳು ಮತ್ತು ಪರಸ್ಪರ ವರ್ಗಾವಣೆಗಳ ಮುಂದುವರೆದ ಕ್ರಮಗಳು** | | |
| 6 | ಅಂತರ್ ಘಟಕ ಕೋರಿಕೆ / ಪರಸ್ಪರ ವರ್ಗಾವಣೆ ಪ್ರಕರಣಗಳಲ್ಲಿ, ಉಪನಿರ್ದೇಶಕರು [ಆಡಳಿತ] ಇವರು ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ಪಡೆದ ಆದ್ಯತೆಯ ದೃಢೀಕೃತ ಪ್ರಮಾಣ ಪತ್ರಗಳನ್ನು, ಸಂಬಂಧಿಸಿದ ವರ್ಗಾವಣಾ ಪ್ರಾಧಿಕಾರಿಗಳಿಗೆ, ವಿಭಾಗೀಯ ಸಹನಿರ್ದೇಶಕರು/ ಅಪರ ಆಯುಕ್ತಾಲಯದ ಸಹ ನಿರ್ದೇಶಕರು ಮತ್ತು ನಿರ್ದೇಶಕರು, (ಪ್ರಾಥಮಿಕ ಶಿಕ್ಷಣ) ಇವರಿಗೆ ಮುದ್ದಾಂ ಸಲ್ಲಿಸಬೇಕಾದ ದಿನಾಂಕ (ತಾತ್ಕಾಲಿಕ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕರುಗಳ ಅರ್ಜಿಗಳನ್ನು ಮಾತ್ರ ವರ್ಗಾವಣಾ ಪ್ರಾಧಿಕಾರಕ್ಕೆ ಸಲ್ಲಿಸುವುದು.) | 1)ವಿಭಾಗೀಯಸಹನಿರ್ದೇಶಕರಿಗೆ (ವಿಭಾಗದ ಒಳಗಿನ ಅಂತರ್ ಜಿಲ್ಲಾ ವರ್ಗಾವಣೆ ಪ್ರಕರಣಗಳು ಮತ್ತು ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳ ಪಟ್ಟಿಯ ಪ್ರತಿ)ದಿ: 16/10/2018<br><br>2) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ (ಅಂತರ್ ವಿಭಾಗದ ವರ್ಗಾವಣೆ ಪ್ರಕರಣಗಳು) – 16/10/2018 | 1) ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ ಮೈಸೂರು<br>3) ಅಪರ ಆಯುಕ್ತಾಲಯದ<br>4) ಸಹನಿರ್ದೇಶಕರು, ಧಾರವಾಡ /ಗುಲ್ಬರ್ಗಾ<br>5) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ |
| 7 | ಪರಸ್ಪರ ವರ್ಗಾವಣೆಗಳ (ಘಟಕದ ಒಳಗೆ / ಘಟಕದ ಹೊರಗೆ) | 16/10/2018 | 1) ಜಿಲ್ಲಾ ಉಪನಿರ್ದೇಶಕರು[ಆಡಳಿತ]<br>2) ವಿಭಾಗೀಯ ಸಹನಿರ್ದೇಶಕರು, |

<table>
<tr><td></td><td>ಅಂತಿಮ ಆದ್ಯತಾ ಪಟ್ಟಿ ಪ್ರಕಟಣೆ (ಸೂಚನಾ ಫಲಕ/ಇಲಾಖಾ ವೆಬ್‌ಸೈಟ್‌ನಲ್ಲಿ)</td><td></td><td>ಬೆಂಗಳೂರು/ ಮೈಸೂರು<br>1) ಸಹನಿರ್ದೇಶಕರು, ಧಾರವಾಡ/ ಗುಲ್ಬಾರ್ಗಾ<br>2) ನಿರ್ದೇಶಕರು, ಪ್ರಾಥಮಿಕ ಶಿಕ್ಷಣ</td></tr>
<tr><td>8</td><td>ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ ಘಟಕದ ಒಳಗೆ ಪ್ರಾಥಮಿಕ ಶಾಲಾ ಶಿಕ್ಷಕರ ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ (ಆನ್-ಲೈನ್)</td><td>17/10/2018</td><td>ಉಪನಿರ್ದೇಶಕರು(ಆಡಳಿತ)</td></tr>
<tr><td rowspan="4">9</td><td colspan="2">ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್</td><td rowspan="4">ಜಿಲ್ಲಾ ಉಪನಿರ್ದೇಶಕರು (ಆಡಳಿತ)</td></tr>
<tr><td>'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್</td><td rowspan="3">22/10/2018<br>ರಿಂದ<br>27/10/2018</td></tr>
<tr><td>'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು)</td></tr>
<tr><td>'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್</td></tr>
<tr><td rowspan="3">10</td><td colspan="2">ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು / ಹಿರಿಯ ಮುಖ್ಯ ಶಿಕ್ಷಕರು/ ವಿಶೇಷ ಶಿಕ್ಷಕರ ವೃಂದದವರಿಗೆ ಘಟಕದೊಳಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್</td><td rowspan="3">ಜಿಲ್ಲಾ ಉಪನಿರ್ದೇಶಕರು (ಆಡಳಿತ)</td></tr>
<tr><td>'ಬಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್</td><td rowspan="2">29/10/2018<br>ರಿಂದ<br>30/10/2018</td></tr>
<tr><td>'ಸಿ' ವಲಯದ ಶಿಕ್ಷಕರನ್ನು 'ಎ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೊಳಪಟ್ಟು)</td></tr>
</table>

| | | | |
|---|---|---|---|
| | 'ಸಿ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | | |
| 11 | **ಕಡ್ಡಾಯ ವರ್ಗಾವಣೆ – ಮುಂದುವರೆದ ಕ್ರಮಗಳು** | | |
| | **ಕಡ್ಡಾಯ ವರ್ಗಾವಣೆ – ಸೆಕ್ಷನ್ 3ಎ(1)(2) ರಂತೆ** | | |
| | 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ (ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು)<br>'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣಾ ಕೌನ್ಸಿಲಿಂಗ್ | 02/11/2018 ರಿಂದ 03/11/2018 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 12 | ಕ್ರಿಮಿನಲ್ / ಶಿಸ್ತು ಪ್ರಕರಣಗಳನ್ನೆದುರಿಸುತ್ತಿರುವ ಶಿಕ್ಷಕರ ವರ್ಗಾವಣೆ | 03/11//2018 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| | **ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಳು – ಮುಂದುವರೆದ ಕ್ರಮಗಳು** | | |
| 13 | ಕೋರಿಕೆ ವರ್ಗಾವಣೆಗೆ ಸಂಬಂಧಿಸಿದಂತೆ (ಘಟಕದ ಹೊರಗೆ) ಅಂತಿಮ ಆದ್ಯತಾ ಪಟ್ಟಿ (Final list) ಪ್ರಕಟಣೆ | 27/10/2018 | 1)ಆಯುಕ್ತರ ಕಛೇರಿ. ನಿರ್ದೇಶಕರು (ಪ್ರಾಥಮಿಕ)<br>3) ಸಹನಿರ್ದೇಶಕರು.ಅಪರ ಆಯುಕ್ತರ ಕಛೇರಿ ಧಾರವಾಡ/ಕಲಬುರಗಿ.<br>4) ಸಹನಿರ್ದೇಶಕರು.ಬೆಂಗಳೂರು/ ಮೈಸೂರು |
| 14 | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ (ಘಟಕದ ಒಳಗೆ) | 05/11/2018 | ಜಿಲ್ಲಾ ಉಪನಿರ್ದೇಶಕರು (ಆಡಳಿತ) |
| 15 | ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದವರಿಗೆ ಘಟಕದ ಹೊರಗಿನ ಕೋರಿಕೆ ವರ್ಗಾವಣೆಗಳಿಗೆ ಕೌನ್ಸಿಲಿಂಗ್ | 12/11/2018 ರಿಂದ 20/11/2018 (ವಿಭಾಗದೊಳಗಿನ ಅಂತರ್ ಘಟಕ ಮತ್ತು ವಿಭಾಗದ ಹೊರಗಿನ ಅಂತರ್ ಘಟಕ ವರ್ಗಾವಣೆಗಳಿಗೆ . ವೇಯ್ಟೇಜ್ ಅಂಕಗಳ ಆಧಾರದಲ್ಲಿದ್ದಂತೆ ಒಂದೇ ಆದ್ಯತಾ ಪಟ್ಟಿಯನ್ನು ಅನುಸರಿಸಲಾಗುತ್ತದೆ) | ಪ್ರಾಥಮಿಕ<br>• ವಿಭಾಗದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್–ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. ವರ್ಗಾವಣಾ ಆದೇಶದಲ್ಲಿ ನಿರ್ದೇಶಕರ ಮೇಲು ಸಹಿಯನ್ನು ಪಡೆದು ಆದೇಶಗಳನ್ನು ಹೊರಡಿಸತಕ್ಕದ್ದು. |

| | | | |
|---|---|---|---|
| **16** | ಪರಸ್ಪರ ವರ್ಗಾವಣೆಗೆ ಕೌನ್ಸಿಲಿಂಗ್‌ಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ (ಘಟಕದ ಹೊರಗೆ)<br>ಒಂದನೇ ಹಂತದಲ್ಲಿ "ವಿಭಾಗದ ಒಳಗೆ<br>ಎರಡನೇಯ ಹಂತದಲ್ಲಿ" ಅಂತರ್ ವಿಭಾಗ | 22/11/2018<br>ಮತ್ತು<br>23/11/2018 | ಪ್ರಾಥಮಿಕ<br>• ವಿಭಾಗದೊಳಗಿನ ಅಂತರ್ ಜಿಲ್ಲಾ ವರ್ಗಾವಣೆಗಳು – ವಿಭಾಗೀಯ ಸಹ ನಿರ್ದೇಶಕರು (ವಿಭಾಗದ ಕೇಂದ್ರ ಸ್ಥಳದಲ್ಲಿ)<br>• ಅಂತರ್ ವಿಭಾಗದ ವರ್ಗಾವಣೆಗಳು – ವರ್ಗಾವಣಾ ಪ್ರಾಧಿಕಾರಿಯವರು ಆನ್-ಲೈನ್ ನಲ್ಲಿ ಅನುಮೋದಿಸಿರುವ ಪಟ್ಟಿಯನ್ನು ಆಧರಿಸಿ ವಿಭಾಗದ ಕೇಂದ್ರ ಸ್ಥಳದಲ್ಲಿಯೇ ವಿಭಾಗೀಯ ಸಹ ನಿರ್ದೇಶಕರು/ಅಪರ ಆಯುಕ್ತಾಲಯದ ಸಹನಿರ್ದೇಶಕರು ಅಂತರ್ ವಿಭಾಗೀಯ ವರ್ಗಾವಣೆಗಳನ್ನು ಸಹ ನಿರ್ವಹಿಸುವುದು ಮತ್ತು ಪ್ರಾಥಮಿಕ ಶಿಕ್ಷಣ ನಿರ್ದೇಶಕರು ವರ್ಗಾವಣಾ ಮೇಲುಸ್ತುವಾರಿ ಕಾರ್ಯವನ್ನು ಕೈಗೊಳ್ಳುವುದು. |

ಅಡಕ: ಉಲ್ಲೇಖಿತ ಜ್ಞಾಪನಗಳ ಪ್ರತಿಗಳು

(ಡಾ॥ ಪಿ.ಸಿ.ಜಾಫರ್, ಭಾ.ಆ.ಸೇ)
ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಇವರಿಗೆ,

1. ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಮುಂದಿನ ಕ್ರಮಕ್ಕಾಗಿ
3. ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ (ಉಪನಿರ್ದೇಶಕರ ಮುಖಾಂತರ)
4. ಹಿರಿಯ ಸಹಾಯಕ ನಿರ್ದೇಶಕರು ಹಾಗು ಸಹಾಯಕ ನಿರ್ದೇಶಕರು,, ಇ-ಗೌರ್ನೆನ್ಸ್, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-ಪ್ರಸಕ್ತ ವರ್ಗಾವಣೆಗಳಿಗೆ ಈಗಾಗಲೇ ಸಭೆಯಲ್ಲಿ ಸೂಚಿಸಿರುವಂತೆ 'ತಂತ್ರಾಂಶವನ್ನು' ಸಜ್ಜುಗೊಳಿಸಿ ಅಗತ್ಯ ತಾಂತ್ರಿಕ ಸಹಕಾರವನ್ನು ಒದಗಿಸಲು ಸಂಬಂಧಿತ ತಂಡವನ್ನು ನಿಯೋಜಿಸಲು ಮತ್ತು ವೇಳಾಪಟ್ಟಿಯಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿದೆ.
5. ಕಾರ್ಯಕ್ರಮಾಧಿಕಾರಿಗಳು , ಸ್ಯಾಟ್ಸ್ (ಡೈಸ್) ಶಾಖೆ , ಇವರಿಗೆ ಸೂಕ್ತ ಕ್ರಮಕ್ಕಾಗಿ.

ಪ್ರತಿಯನ್ನು:-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ಇವರಿಗೆ ವಂದನಾ ಪೂರ್ವಕವಾಗಿ ಸಲ್ಲಿಸಿದೆ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಸಹ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
6. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ/ಧಾರವಾಡ
7. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು
9. ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಕೆ.ಜಿ.ರಸ್ತೆ, ಬೆಂಗಳೂರು.
10. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ), ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
11. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
12. ಹಿರಿಯ ಪ್ರೋಗ್ರಾಮರ್, ಇ – ಗವರ್ನೆನ್ಸ್ ವಿಭಾಗ ಇವರಿಗೆ ಕ್ರಮಕ್ಕಾಗಿ
13. ಹಿರಿಯ ಪ್ರೋಗ್ರಾಮರ್, ಡೈಸ್ ಶಾಖೆ ಇವರಿಗೆ ಕ್ರಮಕ್ಕಾಗಿ
14. ಇಲಾಖಾ ವೆಬ್-ಸೈಟ್ನಲ್ಲಿ ರಾಜ್ಯದ ಎಲ್ಲಾ ಶಿಕ್ಷಕರ ಮತ್ತು ಇತರೆ ಸಾರ್ವಜನಿಕರ ಮಾಹಿತಿಗೆ ಪ್ರಕಟಣೆಗೆ
15. ಕಛೇರಿ ಪ್ರತಿ.